# ಶಿವಣ್ಣ ಔಷಧಿಯಿಂದ ಗಂಗೆ ಮಗಳು ಚೇತರಿಕೆ

ಆ ದಿನ ಚಾಮುಂಡಿ ಬೆಟ್ಟ ಏರಿ ಪೂಜೆ ಮುಗಿಸಿ ಬರುವಾಗ ಶಿವಣ್ಣ ಬಸ್ಸು ಟಿಕೇಟು ತರಲು 'ಕ್ಯೂ' ನಿಂತಾಗ ಪ್ರಸಾದ ಒಬ್ಬನೇ ಬೆಟ್ಟದ ಅಂಚಿಗಿದ್ದ ಗೋಡೆ ಒರಗಿ, ಕೆಳಗೆ ನೋಡುತ್ತಾ ನಿಂತಿದ್ದ. ದೇವರ ಸೇವೆ ಮಾಡಿದರೆ ಶಾಂತಿ ಸಿಕ್ಕೀತು. ಆದರೆ ಅವನಿಗೆ ಹಾಗಾಗಲಿಲ್ಲ. ಎದೆ ಸಿಡಿದು ಹೋಗುವ ಹಾಗೆ ಮನಸ್ಸು ಒತ್ತಡ ಕೊಡುತ್ತಿತ್ತು. ಅವನೊಬ್ಬ ಬೇಟೆಗೆ ಸಿಕ್ಕಿಕೊಂಡ ಜಿಂಕೆ. ಅದನ್ನು ಹಿಂಸೆ ಮಾಡುವ ಬೇಟೆಗಾರನೂ ಅವನಲ್ಲೇ ಇದ್ದಾನೆ. ಒಳಗೆ ದಟ್ಟ ಕಾಡಿನಲ್ಲಿ ಓಡುವ ಜಿಂಕೆ ಹಿಂಡುಗಳಿಗೂ ಹಿಂಬಾಲಿಸುತ್ತಿರುವ ಬೇಟೆಗಾರನಿಗೂ ತೀಕ್ಷ್ಣ ಸ್ಪರ್ಧೆ, ಒತ್ತಡ. ತನ್ನ ಹಸಿವೆ ಒತ್ತಡ ಬೇಟೆಗಾರನಿಗಿದ್ದರೆ, ಜಿಂಕೆ ಹಿಂಡಿಗೆ ಪ್ರಾಣ ಭಯ! ಅವರವರ ಒತ್ತಡಕ್ಕೆ ಅಂತ್ಯ ಒಂದು ಕ್ಷಣದಲ್ಲಿ ಬಂದೇ ಬರುತ್ತದೆ. ಬಂದಾಗ ಜಿಂಕೆ ಸತ್ತುಹೋಗುವುದು. ಬೇಟೆಗಾರ ಹೊಟ್ಟೆಗೆ ತಣಿವು ತಂದುಕೊಳ್ಳುತ್ತಾನೆ.

